ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ಮಾಯಸಂದ್ರ ಹೋಬಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 7.04.16

ಈ ವಾರದ ಮುನ್ಸೂಚನೆ (8.4.16 to 12.4.16 ವರೆಗೆ)

ನಿಯತಾಂಕಗಳು	8.04.16	9.04.16	10.04.16	11.04.16	12.04.16
ಮಳೆ (ಮಿ ಮಿ)	0	0	1	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	37	36	36	37	37
ಕನಿಷ್ಠ ಉಷ್ಣಾಂಶ (ಡಿ.ಸೆ.)	22	23	23	23	23
ಮೋಡ (ಪ್ರಮಾಣ)	0	1	5	3	1
ಅರ್ದ್ರತೆ ೭.೨೦ ಬೆ (ಶೇ)	99	93	83	77	76
ಅರ್ದ್ರತೆ ೨.೨೦ ಮ (ಶೇ)	18	26	22	21	21
ಗಾಳಿಯ ವೇಗ (ಕಿ.ಮಿ/ಗಂಟೆಗೆ)	11	3	8	8	10
ಗಾಳಿಯ ದಿಕ್ಕು (ಡಿಗ್ರಿ)	162	190	246	250	250

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ಮಾಯಸಂದ್ರ ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳು ಒಣ ಹವೆ ಮುಂದುವರೆಯಲಿದೆ. ದಿನದ ಗರಿಷ್ಠ ಉಷ್ಣಾಂಶವು 36-37°C ಮತ್ತು ಕನಿಷ್ಠ 22-23°C ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 76-99 % ಇದ್ದು, ಮಧ್ಯಾಹ್ನ 18-26 % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 8-11 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ✓ ಬರುವ ದಿನಗಳಲ್ಲಿ ಬಿಸಿಲಿನ ತಾಪ ಹೆಚ್ಚಾಗುವುದು, ತರಕಾರಿ ಹಾಗೂ ಇತರೆ ಬೆಳೆಗಳಿಗೆ ಸರಿಯಾದ ಪ್ರಮಾಣದಲ್ಲಿ ನೀರು ಒದಗಿಸಬೇಕು.
- ✓ ಕೋಳಿ ಸಾಕಣೆ,ಜಾನುವಾರು, ರೇಷ್ಮೆ ಕೃಷಿ ಬಿಸಿಲಿನ ತಾಪದಿಂದ ರಕ್ಷಿಸಲು ಸೂಕ್ತ ವ್ಯವಸ್ಥೆ ಕೊಡಬೇಕು.
- ✓ ನೀರು ಬರಿದಾಗಿರುವ ಕೆರೆಗಳಲ್ಲಿ ಕೆರೆಗೋಡು ಮಣ್ಣನ್ನು ತೆಗೆದು ಭೂಮಿಗೆ ಸೇರಿಸುವುದರಿಂದ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಬಹುದು
- ✓ ಪೂರ್ವ ಮುಂಗಾರಿಗೆ ಬಿತ್ತನೆ ಬೀಜಗಳನ್ನು ಸಿದ್ದತೆ ಮಾಡಿಕೊಳ್ಳಿ.
- ✓ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಸರಾಸರಿ ೪೦ ಮತ್ತು ೯೩ ಮಿ.ಮೀ ಇರುವುದರಿಂದ ಮೊದಲನೆ ಬೆಳೆಯಾಗಿ ಅಲಸಂದೆ, ಎಳ್ಳು, ಉದ್ದು, ಹೆಸರು ಮೇ ತಿಂಗಳಿನಲ್ಲಿ ಬಿತ್ತ ಬಹುದಾದ ಇವುಗಳ ಬೇಸಾಯಕ್ಕೆ ಪರಿಕರಗಳ ಪೂರಕಗಳನ್ನು ಸಿದ್ಧತೆ ಮಾಡಿಕೊಳ್ಳಿ.
- ✓ ಮಾವು: ತೇವಾಂಶದ ರಕ್ಷಣೆಗೆ ಬೆಳೆಗಳ ಉಳಿಕೆ ಮತ್ತು ಕಳೆಗಳನ್ನು ಕತ್ತರಿಸಿ ಹೊದಿಕೆ ಮಾಡುವುದು.
- ✓ ಮಾವಿನ ಮರದ ಕೆಳಗೆ ಬೆಳೆದಿರುವ ಕಳೆಗಿಡಗಳನ್ನು ಕಡಿದುಹಾಕಿ ಸ್ವಚ್ಚಗೊಳಿಸಬೇಕು.
- ✓ ಹಿಂಗಾರು ಬೆಳೆಗಳ ಉಳಿಕೆಗಳನ್ನು ಸುಡಬಾರದು, ಅದನ್ನು ಗೊಬ್ಬರ ತಯಾರಿಸಲು ಉಪಯೋಗಿಸಬೇಕು.

ಸಸ್ಯ ಸಂರಕ್ಷಣೆ:

- ✓ **ರಸ ಹೀರುವ ಕೀಟಗಳು:** ಇವುಗಳ ಹತೋಟಿಗೆ ಶೇ. ೪ರಷ್ಟು ಬೇವಿನ ಕಷಾಯವನ್ನು ಸಿಂಪಡಿಸಬೇಕು ಅಥವಾ ಬೇವಿನ ಎಣ್ಣೆಯನ್ನು ಸಿಂಪಡಿಸಬೇಕು ಅಥವಾ ಇಮಿಡಕ್ಲೋಪ್ರಿಡ್ (0.5 ml/L) ಸಿಂಪಡಿಸಿ. ಅಂಟು ದ್ರಾವಣವನ್ನು ಲೇಪಿಸಿದ ಹಳದಿ ಬಣ್ಣದ ಅಂಟು ಬಲೆಗಳನ್ನು ಅಲ್ಲಲ್ಲಿ ಇಡುವುದರಿಂದ ಬಿಳಿನೊಣ, ರೆಕ್ಕೆ ಇರುವ ಏಫಿಡ್ಸ್ ಹಾಗೂ ಇನ್ನಿತರೆ ಕೀಟಗಳು ಆಕರ್ಷಣೆಗೊಂಡು ಆ ಬಲೆಗೆ ಅಂಟಿಕೊಳ್ಳುತ್ತವೆ.
- ✓ ಗುಲಾಬಿಯಲ್ಲಿ ಹಳದಿ ರೋಗ ಕಂಡುಬಂದರೆ ಮಲ್ಟಿಪ್ಲೆಕ್ಸ್ (೨.೦ ಗ್ರಾಂ ಪ್ರತಿ ಲೀ ಗೆ) ಸಿಂಪಡಿಸಿ.

ನೋಡಲ್ ಅಧಿಕಾರಿ:

ಕೃಷಿ ಹವಾಮಾನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು